

ನೀಟಾಗಿ ಎಣ್ಣೆ ಹಾಕಿ ಬಾಚಿದ ಕ್ರಾಪು, ತಿದ್ದಿ ತೀಡಿದ ಬೈತಲೆ, ಹೊಟ್ಟೆಯ ಮೇಲೆ ಬಿಗಿದ ಬೆಲ್ಟು ನೋಡಿ, 'ಇದಾವುದೋ ಹಳೆಯ ಪ್ರಾಣಿ, ನನ್ನಂತೆ' ಎಂದುಕೊಳ್ಳುತ್ತ ಸ್ವಾಗತಿಸಿದೆ. ಸಂಕೋಚದೊಂದಿಗೆ ಆರಂಭಿಸಿದ ಕೆಟ್ಟ ಇಂಗ್ಲಿಷ್ ಕೇಳಲು ತ್ರಾಸದಾಯಕವಾಗಿತ್ತು. 'ಕ್ಯಾಂಪಸ್ ಸೆಲೆಕ್ಷನ್‌ಗೆ ಹೋದವರು ಹೇಗೆ ಆರಿಸಿದರೋ ಈ ಮಿಕವನ್ನು? ಅಭ್ಯರ್ಥಿಗಳು 'ಬೇಕು' ಎಂದಾಕ್ಷಣ ತುಸು ಹೆಚ್ಚು ಕಡಿಮೆ ಆರಿಸಿಬಿಡುತ್ತಾರೆ. ಇವರೊಂದಿಗೆ ಗುದ್ದಾಡಿ ಕೆಲಸ ತೆಗೆದುಕೊಳ್ಳುವವರೆಗೆ ನಮಗೆ ಏಳೂ ಹನ್ನೊಂದು' ಎಂದು ಯೋಚಿಸುತ್ತಲೇ ಅವನ ಬೆವರು ಹರಿಯುವ ಮುಖ ನೋಡಿ, "ಕೂತ್ಕೊಳ್ಳಿ, ಎಲ್ಲಿಂದ ಬಂದಿರಿ?" ಎಂದು ಕೇಳಿದೆ. ಕನ್ನಡ ಕೇಳಿದಾಕ್ಷಣ ಜೀವ ಬಂದಂತೆ ನಕ್ಕ ಹುಡುಗ, "ನಾ ಬೆಳಗಾವಿ ಸಮೀಪ ಖಾನಾಪುರದಾಂವರೀ. ಬೆಳಗಾವ್ಯಾಗ ಎಂಜಿನಿಯರಿಂಗ್ ಓದೇನ್ರಿ. ಅಲ್ಲೇ ಕ್ಯಾಂಪಸ್ ಆತ್ರಿ" ಎಂದ. ತಲೆದೂಗಿದೆ. ಎಣ್ಣೆಗೆಂಪು ಬಣ್ಣದ ಕಳೆಕಳೆಯಾಗಿದ್ದ ಮುಖ, ಎತ್ತರದ ನಿಲುವು, ತೆಳು ದೇಹ, ಸಾಮಾನ್ಯ ಎನಿಸುವ ರೂಪು. 'ಹಳ್ಳಿ ಹುಡುಗ' ಎಂದು ಮೊದಲ ನೋಟಕ್ಕೇ ಗೊತ್ತಾಗುತ್ತಿತ್ತು. ಇಲ್ಲವಾದರೆ ಇತ್ತೀಚೆಗೆ ಪಟ್ಟಣಗಳಲ್ಲಿ, ಅದೂ ಮುಖ್ಯವಾಗಿ ಬೆಂಗಳೂರಿನಲ್ಲಿ ಓದಿದ ಹುಡುಗರಾರೂ ಹೊಟ್ಟೆಯ ಮೇಲೆ ಪ್ಯಾಂಟು ಹಾಕುವುದಿಲ್ಲ. ಎಲ್ಲ ಸೊಂಟದ ಕೆಳಗೆ ಬೆಲ್ಟ್ ಬಿಗಿಯುವದು. ವೆಸ್ಟ್ ಪ್ಯಾಂಟ್ಸ್ ಅಂತೆ. ವೆಸ್ಟೋ ವೇಸ್ಟೋ ಗೊತ್ತಿಲ್ಲ. ಕೂದಲನ್ನು ಕ್ರಾಪು ತೆಗೆದು ಎಣ್ಣೆ ಹಚ್ಚಿ ನೀಟಾಗಿ ಬಾಚುವದು ಇಂದಿನ ನಗರದ ಹುಡುಗರ ಜಾಯಮಾನಕ್ಕೇ ಒಗ್ಗುವದಿಲ್ಲ. ಅವು ಅವರಂತೆ ಅಂಕೆಯಿಲ್ಲದೇ ಹಾರಾಡುತ್ತಿರಬೇಕು. ಇಲ್ಲವೇ ಜೆಲ್ ಲೇಪಿಸಿ ವಿವಿಧ ಶೈಲಿಯಲ್ಲಿ ಸೆಟೆದು ನಿಲ್ಲಬೇಕು. ಅದೇಕೋ ಈ ಹುಡುಗನ ಬಗ್ಗೆ 'ಪಾಪ' ಎನಿಸಿ ಆತ್ಮೀಯ ಭಾವ ಉಂಟಾಯಿತು.

ಅಂದೇ ಶುರುವಾಯಿತು ನೋಡಿ ಗುರುಶಿಷ್ಯರ ಜೋಡಿ. ಇಂಗ್ಲಿಷ್‌ನ ಕೊರತೆಯಿಂದಾಗಿ ಯಾರೂ ತಮ್ಮ ಟೀಮಿಗೆ ಸೇರಿಸಿಕೊಳ್ಳಲಿಲ್ಲ. ನಾನೇ ನನ್ನ ಪ್ರೊಜೆಕ್ಟಿನಲ್ಲಿ ತೆಗೆದುಕೊಂಡು ಕೆಲಸ ಹೇಳಿಕೊಟ್ಟು ಮಾಡಿಸಿಕೊಳ್ಳತೊಡಗಿದೆ. ಹುಡುಗ, ಅದೇ ರಾಜೇಶ ಚಾಣಾಕ್ಷನಲ್ಲದಿದ್ದರೂ ಮೊದ್ದಲ್ಲ. ಹೇಳಿಕೊಟ್ಟದ್ದನ್ನ ಚಾಚೂ ತಪ್ಪದೇ ಒಪ್ಪಿಸುವಾತ. ಪ್ರಾಮಾಣಿಕ. ಹೆಚ್ಚಾದರೆ ರಾತ್ರಿಯೆಲ್ಲ ಕುಳಿತು ಕೆಲಸ ಮಾಡುವ ನಿಷ್ಠೆ. ಪರವಾಗಿಲ್ಲ ಎನಿಸಿದ. ನಮಗೆ ಜಾಣ ಹುಡುಗರಗಿಂತ ಇಂಥವರೇ ಬೇಕು. ಹೇಳಿದ ಕೆಲಸ ಮಾಡಿದರೆ ಸಾಕು. ಅಲ್ಲದೇ ಉಳಿದವರಲ್ಲಿ ಕೆಲವರಂತೆ ಆಫೀಸು ಮುಗಿದಾಕ್ಷಣ ಬಾರುಗಳ ಮುಖ ನೋಡದೇ ಸೀದಾ ರೂಮು ಸೇರಿ ಅನ್ನ ಸಾರು ಮಾಡಿಕೊಳ್ಳುತ್ತಿದ್ದ ಹುಡುಗ ನನಗೆ ಇಷ್ಟವಾದ. ವಾರಾಂತ್ಯದಲ್ಲಿ ಭಕ್ಕರಿ(ಜೋಳದ ರೊಟ್ಟಿ) ಊಟವನ್ನು ಹುಡುಕಿಕೊಂಡು ಪಟ್ಟಾಗಿ ಹೊಡೆದು ಓಡಾಡುತ್ತಿದ್ದ. ನಮ್ಮ ಮಧ್ಯೆ ಮಾತುಕತೆ, ಆತ್ಮೀಯತೆ ಬೆಳೆಯುತ್ತಿತ್ತು. ಹ್ಲಾಂ, ಕತೆ ಮಾತ್ರ ತುಂಬಾ ಚೆನ್ನಾಗಿ ಹೇಳುತ್ತಿದ್ದ. ಆಫೀಸಿನಲ್ಲಿ, ಹೊರಗೆ ಯಾವುದೇ ಘಟನೆ ನಡೆದರೂ ಅದು ಕೈ, ಕಾಲುಗಳನ್ನು ಬೆಳೆಸಿಕೊಂಡು ರಂಗುರಂಗಾಗಿ ಅವನ ಬಾಯಿಯ ಮೂಲಕ ಹೊರಟು ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತಿತ್ತು. ಹೇಳಿ ಕೇಳಿ ನಾನೊಬ್ಬ ಕತೆಗಾರ. ಇದೇ ನನಗೆ ಮೋಡಿ